ಶ್ರೀ ಎಂ. ವಿ. ಕೃಷ್ಣಪ್ಪ.—ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಬರೆದದ್ದೂ ಕೇಳಬೇಕು, ಪಿ. ಎಸ್. ಪಿ. ಯವರು ಬರೆದದ್ದೂ ಕೇಳಬೇಕು. ಕಮ್ಯೂನಿಷ್ಟರು ಬರೆದದ್ದು ಕೇಳಬೇಕು. ಸರಕಾರ ನಡೆಸುವವರು ಎಲ್ಲಾ ಪಾರ್ಟಿಗಳಿಂದ ಬಂದ ಶಿಫಾರಸನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಬಜೆಟ್ ಮಾಡ ಬೇಕಾದರೆ ಎಲ್ಲರ ದೃಷ್ಟಿಯನ್ನೂ ಮನಸ್ಸಿನಲ್ಲಿಟ್ಟುಕೊಂಡು ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಮಳೆ ಬಾರದೆ ಅಭಾವ ವಿರುವುದರಿಂದ, ಹೆಚ್ಚಿಗೆ ನೀರಾವರಿ ಕೊಡುತ್ತೇವೆ ಎಂದು ಹೇಳಿದ್ದೀರ. ಚಿತ್ರದುರ್ಗಕ್ಕೆ ಕೊಟ್ಟ ರೀತಿಯಲ್ಲಿಯೆ ತುಮಕೂರು ಡಿಸ್ಟ್ರಿಕ್ಟ್‌ಗೂ ಜಾಸ್ತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರ?

ಶ್ರೀ ಎಂ. ವಿ. ಕೃಷ್ಣಪ್ಪ.—ಚಿತ್ರದುರ್ಗಕ್ಕಿಂತಲೂ ತುಮಕೂರಿಗೆ ಜಾಸ್ತಿ ಕೊಡುತ್ತೇವೆ, ಏಕೆಂದರೆ ಮಧುಗಿರಿ ತಾಲ್ಲೂಕಿನ 4 ತಾಲ್ಲೂಕುಗಳು ಪೂರ್ತಿ ಅಭಾವ ಪ್ರದೇಶ. ತುಮಕೂರು, ಪಾವಗಡ, ಸಿರ ಮತ್ತು ಮಧುಗಿರಿ ಈ 4 ತಾಲ್ಲೂಕುಗಳಲ್ಲಿ ಸ್ಟೇಟಿನಲ್ಲಿ ಎಲ್ಲ ಪ್ರದೇಶಗಳಿಗಿಂತ ಮಳೆ ಕಡಿಮೆ ಇರುವುದರಿಂದ, ಎಲ್ಲ ಜಿಲ್ಲೆಗಳಿಗಿಂತಲೂ ಆ ಭಾಗಕ್ಕೆ ಜಾಸ್ತಿ ಹಣ ಕೊಡುತ್ತೇವೆ.

Extent of area under Mulberry Cultivation in the State

* *Q.*—18. . **Sri T. MADAIAH GOWDA** (Ramanagaram).—

Will the Government be pleased to state :—

(*a*) what is the extent of mulberry cultivated in the State ;

(*b*) what is the quantity of Cocoon (i) White, (ii) Mysore and (iii) Mixed, produced in the State for the year 1962-63 ;

(*c*) what is the quantity of mulberry leaves produced per acre in each of the Sericulture area during the above period (only average quantity be given) ;

(*d*) what is the quantity of mulberry leaves consumed to produce various kinds of cocoons per ton ;

(*e*) what is the average Rendetta given for the last three years annually ?

A.—**Sri R. DAYANAND SAGAR** (Deputy Minister for Sericulture).—

(*a*) A little over 1.85 lakh acres.

(*b*) White—about 20 crores in number.
Mysore—About 58.79 crores.
Cross bread—135 lakh Kgs.

(*c*) Average production of mulberry leaves :—

Rainfed per acre		*Irrigated per acre*
Kolar area 2,000 Kgs.	...	4,100 Kgs.
Other areas 1,250 Kgs.	...	2,500 Kgs.

(*d*) 24,000 Kgs. for all kinds of Cocoons.

(*e*)

1960-61	... ...	17.25
1961-62	... ...	16.5
1962-63	... ...	16.5.

ಶ್ರೀ ಟಿ. ಮಾದಯ್ಯ ಗೌಡ (ಕೋಲಾರ).— ಮತ್ತಿತರ ಪ್ರದೇಶಗಳಲ್ಲಿ ಒಂದೊಂದು ಎಕರೆಗೆ ಉಪ್ಪುನೇರಿಳೇ ಸೊಪ್ಪು ಎಷ್ಟು ಬೆಳೆಯುತ್ತದೆಂದು ಕೊಟ್ಟಿದ್ದೀರ. ಚೆನ್ನಪಟ್ಟಣ, ಟಿ.-ನರ್ಸೀಪುರ, ಕೊಳ್ಳೇಗಾಲ ಇವುಗಳ ಕೂಡ ಕೋಲಾರದಷ್ಟೆ ಮುಖ್ಯ ಪ್ರದೇಶಗಳಾಗಿರುವುದರಿಂದ, ಅಲ್ಲಿ ಒದೊಂದು ಎಕರೆಗೆ ಎಷ್ಟೆಷ್ಟು ಬೆಳೆಯುತ್ತಾರೆ ಎನ್ನುವುದನ್ನು ಹೇಳೋಣವಾಗುತ್ತದೆಯೆ ?

ಶ್ರೀ ಆರ್. ದಯಾನಂದ ಸಾಗರ್.—ಕೋಲಾರದಲ್ಲಿ ಉಪ್ಪುನೇರಿಳೆ ಸೊಪ್ಪನ್ನು ಬಹಳ ಚೆನ್ನಾಗಿ ಬೆಳೆಯುತ್ತಾರೆ. ಒಳ್ಳೆಯ ಗೊಬ್ಬರ ಉಪಯೋಗ ಮಾಡುತ್ತಾರೆ. ನೀರಾವರಿಯಿಂದ ಚೆನ್ನಾಗಿ ಬೇಸಾಯ ಮಾಡಿ ಸೊಗಸಾಗಿ ಬೆಳೆಯುತ್ತಾರೆ. ಉತ್ಪತ್ತಿ ಬಹಳ ಚೆನ್ನಾಗಿ ಬರುತ್ತದೆ. ರಾಮನಗರದ ಕೆಲವು ಭಾಗಗಳಲ್ಲಿಯೂ ಚೆನ್ನಾಗಿ ಬೆಳೆಯುತ್ತಾರೆ; ಬಹುಶಃ ಕೋಲಾರಕ್ಕೆ ಹೋಲುತ್ತದೆ ಇನ್ನು ಉಳಿದ ಪ್ರದೇಶಗಳಲ್ಲಿ ಮಳೆ ನೀರಿನಿಂದ ಉಪ್ಪುನೇರಿಳೇ ಸೊಪ್ಪನ್ನು ಬೆಳೆಯುವಾಗ ಅಷ್ಟು ಚೆನ್ನಾಗಿ ಫಲ ಕೊಡುವುದಿಲ್ಲ.

ಶ್ರೀ ಟಿ. ಮಾದಯ್ಯ ಗೌಡ.—ಇತರ ಪ್ರದೇಶಗಳಲ್ಲಿ ಒಂದೊಂದು ಎಕರೆಗೆ ಎಷ್ಟೆಷ್ಟು ಬೆಳೆಯುತ್ತಾರೆ? ಏಕೆಂದರೆ ಕಡಿಮೆ ಬೆಳೆಯುತ್ತಾರೆಂದು ನಾನು ಕೇಳುತ್ತೇನೆ.

ಶ್ರೀ ಆರ್. ದಯಾನಂದ ಸಾಗರ್.—ನಾನು ಈಗಾಗಲೆ ಅಂಕಿಅಂಶಗಳನ್ನು ಕೊಟ್ಟಿದ್ದೇನೆ

ಶ್ರೀ ಸಿ. ಆಂ. ರಂಗೇ ಗೌಡ.—(ಇ) ಗೆ ಉತ್ತರವಾಗಿ 1960-61 ರಲ್ಲಿ, 17-25 ಅಂತ ಲೆಕ್ಕ ಕೊಟ್ಟಿದ್ದೀರಿ. 1949-50ನೆ ಇಸವಿಯಲ್ಲಿ 13·9, 1950-51ರಲ್ಲಿ 14·2 ರೆಂಡೆಟ ಇತ್ತು. ಈಗ ಜಾಸ್ತಿಯಾಗುವುದಕ್ಕೆ ಕಾರಣವೇನು ?

ಶ್ರೀ ಆರ್. ದಯಾನಂದ ಸಾಗರ್.—ಆವರೇಜ್ ರೆಂಡೆಟ 16·5 ಇದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ -ಮೈಸೂರು ರಾಜ್ಯದಲ್ಲಿ ಉಪ್ಪು ನೇರಿಳೆಸೊಪ್ಪು ಒಂದು ಎಕರೆಗೆ ಎಷ್ಟು ಬೆಳೆಯುತ್ತದೆ? ಬಂಗಾಳ ಮತ್ತು ಇತರ ರಾಜ್ಯಗಳಿಗೆ ಹೋಲಿಸಿ ನೋಡಿದರೆ ಬಹಳ ಕಡಿಮೆ ಇದೆಯೆಂದು ಗೊತ್ತಾಗುತ್ತದೆ. ಅದನ್ನು ಮುಂದಕ್ಕೆ ತರುವುದಕ್ಕೆ ಏನೇನು ಕಾರ್ಯಕ್ರಮ ಅಲ್ಲಿ ತೆಗೆದುಕೊಂಡಿದ್ದಾರೆ?

ಶ್ರೀ ಆರ್. ದಯಾನಂದ ಸಾಗರ್.—ಬಂಗಾಳದಲ್ಲಿ ಅಲ್ಯೂವಿಯಲ್ ಸಾಯಿಲ್ ಇದೆ, ಬಹಳ ಫಲವತ್ತಾದ ಜಮೀನಿನಲ್ಲಿ ಬೆಳೆಯುತ್ತಾರೆ. ಗಂಗಾನದಿ ಬಯಲು ಇದೆ. ನಮ್ಮಲ್ಲಿಯೂ ಕೂಡ ಚೆನ್ನಾಗಿ ಬೆಳೆಯಬೇಕು ಎಂಬ ಆಸೆ ಇದೆ. ಕೋಲಾರದಲ್ಲಿ ಬಹಳ ಮುತುವರ್ಜಿಯಿಂದ ಬೆಳೆಯುತ್ತಾರೆ. ಸೊಗಸು ಫಲ ಕೊಡುತ್ತದೆ. ಬೇರೆ ಪ್ರದೇಶಗಳಲ್ಲಿಯೂ ಚೆನ್ನಾಗಿ ಬೆಳೆಯಬೇಕು ಎಂದು ಉಪದೇಶ ಮಾಡುತ್ತೇವೆ, ಒಳ್ಳೆಯ ಗೊಬ್ಬರ ಹಾಕಬೇಕು ಅಂತ ಹೇಳುತ್ತೇವೆ. ಡಿಸೀಸ್-ಫ್ರೀ-ಲೇಯಿಂಗ್ಸ್ ಸಪ್ಲೈ ಮಾಡುತ್ತಾ ಇದ್ದೇವೆ. ಎಷ್ಟು ಅನುಕೂಲಗಳನ್ನು ಸರಕಾರದ ವತಿಯಿಂದ ಕೊಡಬೇಕೋ ಅಷ್ಟನ್ನೂ ಕೊಡುತ್ತಿದ್ದೇವೆ.

ಶ್ರೀ ಸಿ. ಆರ್. ರಂಗೇಗೌಡ.—ಜಪಾನ್, ಚೀನ, ಇಟಲಿಯಲ್ಲಿ ಎಷ್ಟು ರೆಂಡೆಟ ಇದೆ? ಮೈಸೂರಿನಲ್ಲಿ ರೆಂಡೆಟ ಇಷ್ಟು ಜಾಸ್ತಿಯಾಗಲು ಕಾರಣ ಏನು ?

ಶ್ರೀ ಆರ್. ದಯಾನಂದ ಸಾಗರ್.—ಸಿರ್ಕ್ ಹುಳು ಒಳ್ಳೆಯ ಕಕೂನ್ ತಯಾರುಮಾಡಬೇಕಾದರೆ ಪುಷ್ಟಿಕರವಾದ ಆಹಾರವನ್ನು ತಿನ್ನಬೇಕು. ನಮ್ಮ ದೇಶದಲ್ಲಿ, ಕೋಲಾರ ಜಿಲ್ಲೆಯಲ್ಲಿ ಚೆನ್ನಾಗಿ ಸಾಕುತ್ತಾರೆ. ಒಳ್ಳೆಯ ಸಿಲ್ಕು ಪ್ರಡ್ಯೂಸ್ ಮಾಡುತ್ತಾರೆ. ಸರಿಯಾದ ರೆಂಡೆಟ ಕೊಡುತ್ತದೆ. ಬೇರೆ ಪ್ರದೇಶಗಳಲ್ಲಿ ಮಳೆ ನೀರನ್ನು ಉಪಯೋಗಮಾಡಿಕೊಂಡು ಉಪ್ಪುನೇರಿಳೆ ಬೆಳಸುತ್ತಾರೆ. ಅದು ಒಣಗಿಹೋಗಿ ಬಿಡುತ್ತದೆ. ಸೊಪ್ಪು ಹೇಗಿರುತ್ತದೊ ಹುಳು ಹಾಗಿರುತ್ತದೆ, ಕಕೂನ್ ಹಾಗಿರುತ್ತದೆ. ಈ ದೃಷ್ಟಿಯಿಂದ ಚೆನ್ನಾಗಿ ಆರ್ಗನೈಸ್ ಮಾಡಬೇಕು. ರೈತರು ಮುಂದೆಬಂದು ಒಳ್ಳೆಯ ಗೊಬ್ಬರ ಉಪಯೋಗಿಸಿ, ಬಾವಿ ನೀರನ್ನು ತೆಗೆದುಕೊಂಡು ಮಾಡಿದರೆ ಬಹುಶಃ ನಮ್ಮ ರೆಂಡೆಟ ಇಂಪ್ರೂವ್ ಆಗುತ್ತದೆ.

ಶ್ರೀ ಟಿ. ಮಾದಯ್ಯ ಗೌಡ.—ಪರದೇಶಗಳಲ್ಲಿ ರೆಂಡೆಟ 6-7 ಇರುವಾಗ, ನಮ್ಮ ದೇಶದಲ್ಲಿ ಒಂದೇಸಮನೆ 16-17 ಇರಲು ಕಾರಣವೇನು ? ಇದನ್ನು ಕಡಿಮೆ ಮಾಡುವುದಕ್ಕೋಸ್ಕರ ಇಲಾಖೆಯವತಿ ಏನೇನು ಕಾರ್ಯಕ್ರಮಗಳನ್ನು ಅನುಸರಿಸುತ್ತಿದ್ದಾರೆ?

ಶ್ರೀ ಆರ್. ದಯಾನಂದ ಸಾಗರ್.—ಇಲಾಖೆಯಲ್ಲಿ ನಾವು ರೋಗರಹಿತ ಮೊಟ್ಟೆಗಳನ್ನು ತಯಾರು ಮಾಡುತ್ತಾ ಇದ್ದೇವೆ. ಒಳ್ಳೆಯ ಗೊಬ್ಬರವನ್ನು ಕೊಡುತ್ತೇವೆ, ಮತ್ತು ನೀರಾವರಿ ಏರ್ಪಾಡು ಮಾಡುತ್ತೇವೆ. ಸಲಹೆಗಳನ್ನು ಕೊಡುತ್ತೇವೆ. ಸರಕಾರದ ವತಿಯಿಂದ ಏನೇನು ಸಹಾಯ ಮಾಡಬೇಕೊ ಅದನ್ನು ಮಾಡುತ್ತಾ ಇದ್ದೇವೆ.

9-30 A.M.

ಶ್ರೀ ಬಿ. ಎಲ್. ಗೌಡ.—ಚಿತ್ರದುರ್ಗ ಜಿಲ್ಲೆಯಲ್ಲಿ ಇತ್ತೀಚೆಗೆ ಉಪ್ಪುನೇರಿಳೆಯನ್ನು ಹರಿಯೂರು, ಚಳ್ಳಕೆರೆ ಮತ್ತು ಮೊಳಕಾಲ್ಮೂರು ಪ್ರದೇಶಗಳಲ್ಲಿ ಬೆಳೆಯುವುದಕ್ಕೆ ಪ್ರಾರಂಭಿಸಿದ್ದಾರೆ. ಅದಕ್ಕೆ ಸರಕಾರದವರು ಹಣ ಸೌಕರ್ಯವನ್ನು ಕಲ್ಪಿಸಿದ್ದೀರಾ ?

ಶ್ರೀ ಆರ್. ದಯಾನಂದ ಸಾಗರ್.—ಅದನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಡಿಸ್ಟ್ರಿಕ್ಟ್ ಹೆಬ್ಬೂರು ಮತ್ತು ಕುಣಿಗಲ್ ತಾಲ್ಲೂಕಿನಲ್ಲಿ ಭೂಮಿ ಬಹಳ ಉತ್ಕೃಷ್ಟವಾಗಿದ್ದರೂ ಕೂಡ ನರಕಾರದ ಪ್ರೊತ್ಸಾಹ ಮತ್ತು ಆರ್ಥಿಕ ನರವು ಇಲ್ಲದೆ ಇದರ ವ್ಯವಸಾಯ ಕಡಿಮೆಯಾಗುತ್ತಾ ಇರುವುದು ನರಕಾರದವರ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ದಯಾನಂದ ಸಾಗರ್.—ಏನೇನು ನಹಕಾರಗಳನ್ನು ಕೊಡಬೇಕೋ ಅವನ್ನೆಲ್ಲಾ ಕೊಡುತ್ತಾ ಇದ್ದೇವೆ. ಇನ್ನೂ ಏನಾದರೂ ಬೇಕಾಗಿದ್ದರೆ ಆಲೋಚನೆ ಮಾಡುತ್ತೇವೆ.

ಶ್ರೀ ವಿ. ಮಸಿಯಪ್ಪ.—ಉಪ್ಪುನೇರಳೆ ಮತ್ತು ಹುಳು ಉತ್ಪಾದನೆಯ ಕೃಷಿಯನ್ನು ನಂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಎಲ್ಲೆಲ್ಲ ಅವುಗಳನ್ನು ಚೆನ್ನಾಗಿ ಬೆಳೆಯುವುದಕ್ಕೆ ಅವಕಾಶವಿದೆಯೋ ಅಲ್ಲಿಗೆ ಹೆಚ್ಚಿನ ಸೌಕರ್ಯ ಇಲ್ಲ. ಆದ್ದರಿಂದ ಎಲ್ಲೆಲ್ಲ ಇದನ್ನು ಬೆಳೆಸಲಕ್ಕೆ ಅಭಿವೃದ್ಧಿಪಡಿಸಲಕ್ಕೆ ಅವಕಾಶವಿದೆ ಎಂಬ ಒಂದು ಸರ್ವೇ ಮಾಡಿಸಿದ್ದೀರಾ ಮತ್ತು ಆ ಪ್ರದೇಶಗಳಲ್ಲಿ ಇದನ್ನು ಜಾರಿಗೆ ತರುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಆರ್. ದಯಾನಂದ ಸಾಗರ್.—ಸರ್ವೇ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಎಲ್ಲೆಲ್ಲಿ ಬೆಳೆಯುವುದಕ್ಕೆ ಅವಕಾಶವಿದೆ ಅಲ್ಲಿ ಚೆನ್ನಾಗಿ ಬೆಳೆಯುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ ಮತ್ತು ಎಲ್ಲೆಲ್ಲ ಬೇರೆ ಬೇರೆ ಪ್ರದೇಶಗಳಲ್ಲಿ ಬೆಳೆಯುವುದಕ್ಕೆ ಅವಕಾಶವಿದೆ ಅಲ್ಲೂ ಕೂಡ ಮಾಡಬೇಕೆಂದು ಏರ್ಪಾಡು ಮಾಡಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ರೈತರು ಕೃತಕ ಗೊಬ್ಬರವನ್ನು ಹಾಕಿ ನೀರನ್ನು ಉಪಯೋಗಿಸಿಕೊಳ್ಳದೇ ಇರುವುದರಿಂದ ಉಪ್ಪುನೇರಳೇ ಸೊಪ್ಪು ಒಂದು ಎಕರೆಯಲ್ಲಿ ಎಷ್ಟು ಬರಬೇಕೋ ಅಷ್ಟು ಬರದೇ ಕಡಿಮೆ ಬರುತ್ತಾ ಇದೆ ; ಇದನ್ನು ಇತರ ರಾಜ್ಯಗಳಿಗೆ ಹೋಲಿಸುವುದಕ್ಕಾಗುವುದಿಲ್ಲ ಎಂದು ಹೇಳಿದಿರಿ, ನರಕಾರದವರು ನಡೆನತಕ್ಕ ಫಾರಂಗಳಲ್ಲಿ ಎಲ್ಲಾ ಸೌಕರ್ಯಗಳೂ ಅವರಿಗೆ ಇರುವುದರಿಂದ ಅಲ್ಲಿ ಒಂದು ಎಕರೆಗೆ ಎಷ್ಟು ಉಪ್ಪುನೇರಳೇ ಸೊಪ್ಪು ಬೆಳೆಯಬೇಕೋ ಅಷ್ಟೂ ಬೆಳೆಯದೇ ಇರುವುದಕ್ಕೆ ಕಾರಣವೇನು ?

ಶ್ರೀ ಆರ್. ದಯಾನಂದ ಸಾಗರ್.—ನರಕಾರಿ ಫಾರಂಗಳಲ್ಲಿ ಚೆನ್ನಾಗಿ ಬೆಳೆಯುತ್ತಾ ಇದೆ. ಖಾನಗಿ ಫಾರಂಗಳಲ್ಲಿ ಬೆಳೆಯದೇ ಇರಬಹುದು ಅಷ್ಟೆ. ಕುಣಿಗಲ್ ಫಾರಂನಲ್ಲಿ ಮೈಸೂರ್ ಕಕೂನ್ 8-10-11 ರವರೆಗೂ ರೆಂಡೆಟ ಕೊಡುತ್ತದೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಡಿಸ್ಟ್ರಿಕ್ ಹೆಬ್ಬೂರು ಮತ್ತು ಕುಣಿಗಲ್ ಪ್ರದೇಶಗಳಲ್ಲಿ ರೇಷ್ಮೆ ಬೆಳೆಗೆ ಪ್ರೊತ್ಸಾಹ ಮಾಡುವುದಕ್ಕೆ ನೀರಾವರಿ ಬಾವಿಗಳಿಗೆ ಹಣ ಒದಗಿನುತ್ತಾ ಇದ್ದುದು ರಾಜಕೀಯ ಕಾರಣದಿಂದ ನಿಂತು ಹೋಗಿದೆ. ಅದನ್ನು ಜಾಗ್ರತೆ ಒದಗಿನುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ದಯಾನಂದ ಸಾಗರ್.—ಹಣ ಒದಗಿನುವುದು ನಿಂತಿಲ್ಲ, ಅದು ಬರುವುದು ನಿಧಾನವಾಗಿರಬಹುದು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ನರಕಾರದವರು ನಡೆನತಕ್ಕ ಫಾರಂಗಳಲ್ಲಿ ಉಪ್ಪು ನೇರಿಳೇ ಸೊಪ್ಪು ಒಂದು ಎಕರೆಗೆ ಬೆಂಗಾಲ್ ರಾಜ್ಯದಲ್ಲಿ ಬೆಳೆಯತಕ್ಕ ಸೊಪ್ಪಿನಂತೆ ಇಲ್ಲಿ ಬೆಳೆಯುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಆರ್. ದಯಾನಂದ ಸಾಗರ್. - ನರಕಾರಿ ಫಾರಂಗಳಲ್ಲೂ ಬೆಳೆಯುತ್ತಾ ಇದ್ದಾರೆ. ಆದು ಚೆನ್ನಾಗಿ ಇದೆ.

ಶ್ರೀ ಟಿ. ಮಾದಯ್ಯ ಗೌಡ.—(ಬ) ಪ್ರಶ್ನೆಗೆ ಉತ್ತರವಾಗಿ ಮೊದಲನೆಯ ಎರಡನ್ನು ಅಂಕಿಯಲ್ಲಿ ಕೊಟ್ಟಿದ್ದೀರಿ. ಮೂರನೆಯದನ್ನು ಅಳತೆಯಲ್ಲಿ ಕೊಟ್ಟಿದ್ದೀರಿ. ಒಟ್ಟು ಎಷ್ಟು ತೂಕ ಉತ್ಪನ್ನವಾಗುತ್ತದೆ ?

ಶ್ರೀ ಆರ್. ದಯಾನಂದ ಸಾಗರ್.—ಅದನ್ನು ಹೇಳಿದ್ದೇವೆ. ಬಳಿ ತಳಿ ಮತ್ತು ಮೈಸೂರು ತಳಿ ಬೀಜಕ್ಕೆ ಉಪಯೋಗಮಾಡುವುದು ಅವನ್ನು ನಾವು ನಂಬರುಗಳಲ್ಲಿ ಅಳತೆ ಮಾಡುತ್ತೇವೆ. ಕ್ರಾಸ್ ಬ್ರೀಡ್ ಕಮರ್ಷಿಯಲ್ ಫರ್‌ಪನ್‌ಗೆ ಮಾಡುವುದು. ಆದ್ದರಿಂದ ಅದನ್ನು ಕೆ ಜಿ ನಲ್ಲಿ ಲೆಕ್ಕ ಹಾಕುತ್ತೇವೆ.